RA. 34/2024
ಪಿ.ಡಬ್ಲ್ಯೂ.1

**ದಿನಾಂಕಃ 07-08-2025.**

**ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟಿ ಸವಾಲು 5 ಮತ್ತು 6 ನೇ ಎದುರುದಾರರ ಪರ ಮಾನ್ಯ ಶ್ರೀ CTD ಕೀಲರಿಂದ ಃ**

ನಾನು ಆರನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಮಾನ್ಯ ಕೆಳ ಹಂತದ ನ್ಯಾಯಾಲಯದಲ್ಲಿ ನಾನು, ನನ್ನ ಅಕ್ಕ, ತಂಗಿಯರು ಹಾಗೂ ನನ್ನ ತಮ್ಮ ಸೇರಿ ಅಸಲು ದಾವಾ ನಂಬರ 225/2016 ನ್ನು ಪಾಲು ವಾಟ್ನಿಗಾಗಿ ಸಲ್ಲಿಸಿರುತ್ತೇವೆ ಎಂದರೆ ಸರಿ. ನಮ್ಮ ಹೆಸರು ಹಾಗೂ ವಿಳಾಸಗಳನ್ನು ಸದರಿ ದಾವೆಯಲ್ಲಿ ಹಾಗೂ ಪ್ರಸ್ತುತ ಮೇಲ್ಮನವಿಯಲ್ಲಿ ನಮ್ಮ ಮಾನ್ಯ ವಕೀಲರಿಗೆ ನಾವೇ ಹೇಳಿ ಬರೆಸಿರುತ್ತೇವೆ ಎಂದರೆ ಸರಿ. ಸದರಿ ದಾವೆಯಲ್ಲಿ ಹಾಗೂ ಪ್ರಸ್ತುತ ಮೇಲ್ಮನವಿಯಲ್ಲಿ ನಾವುಗಳು ತೋರಿಸಿರುವ ವಿಳಾಸಗಳು ಸರಿಯಾಗಿರುತ್ತವೆ ಎಂದರೆ ಸರಿ. ಸದರಿ ದಾವೆಯನ್ನು ನನ್ನ ಅಕ್ಕ ನಡೆಸಿರುತ್ತಾರೆ ಎಂದರೆ ಸರಿ. ಹಾಗೂ ಅದರಲ್ಲಿ ನನ್ನ ಸದರಿ ಅಕ್ಕ ಸಾಕ್ಷಿಯನ್ನು ಹೇಳಿರುತ್ತಾರೆ ಎಂದರೆ ಸರಿ. ಪ್ರಸ್ತುತ ಮೇಲನ್ಮವಿಯಲ್ಲಿನ ಪ್ರಮಾಣ ಪತ್ರವನ್ನು ಹಾಗೂ ಅರ್ಜಿಗಳನ್ನು ನನ್ನ ಸದರಿ ಅಕ್ಕ ಸಲ್ಲಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ಸದರಿ ನಿಮ್ಮ ಅಕ್ಕ ಸದರಿ ದಾವೆಯಲ್ಲಿ ಸಾಕ್ಷಿಯನ್ನು ನುಡಿದ ನಂತರ ಎಷ್ಟು ಬಾರಿ ನಿಮ್ಮ ಮಾನ್ಯ ವಕೀಲರಿಗೆ ಭೇಟಿಯಾಗಿರುತ್ತಾರೆ ಎಂದು ಕೇಳಿದಕ್ಕೆ ಸಾಕ್ಷಿ ತಮ್ಮ ಮಾನ್ಯ ವಕೀಲರು ಅವರಿಗೆ ಕರೆ ಮಾಡುವುದಾಗಿ ಹೇಳಿದ್ದರಿಂದ ತಾವೆಲ್ಲರೂ ಹುಬ್ಬಳ್ಳಿಗೆ ಹೋಗಿರುವುದಾಗಿ ಹಾಗೂ ತಮ್ಮ ಮಾನ್ಯ ವಕೀಲರು ತಮಗೆ ಕರೆಯನ್ನು ಮಾಡಿರುವುದಿಲ್ಲ ಎಂದು ಹೇಳುತ್ತಾರೆ. ದಿಃ 02-08-2025 ರಂದು ನನ್ನ ಮಾನ್ಯ ವಕೀಲರು ನನಗೆ ಪ್ರಸ್ತುತ ಪ್ರಕರಣದಲ್ಲಿ ನಮ್ಮ ಸಾಕ್ಷಿ ಇರುವುದಾಗಿ ಹೇಳಿರುತ್ತಾರೆ.

2. ನನ್ನ ಸದರಿ ಅಕ್ಕ ಹನಮಂತಿ ಹಾಗೂ ತಂಗಿ ಮಂಜುಳಾ ಇವರುಗಳು ಮದುವೆಯಾದ ನಂತರ ಕೂಡಾ ಅವರ ಗಂಡನ ಜೊತೆಗೆ, ನಮ್ಮ ಜೊತೆ ಹುಬ್ಬಳ್ಳಿಯಲ್ಲಿ ವಾಸ ಮಾಡುತ್ತಿದ್ದಾರೆ. ಸದರಿ ನನ್ನ ಅಕ್ಕ ಹನಮಂತಿ ಇವರು ಮದುವೆಯಾದ ದಿನದಿಂದಲೂ ಇಟಗಿ ಗ್ರಾಮದಲ್ಲಿ ತಮ್ಮ ಗಂಡನ ಮನೆಯಲ್ಲಿ

ವಾಸ ಮಾಡುತ್ತಾರೆ ಎಂದರೆ ಸರಿಯಲ್ಲ. ನನ್ನ ಸದರಿ ತಂಗಿ ಮಂಜುಳಾ ಇವರೂ ಕುಡಾ ತಮ್ಮ ಮದುವೆಯಾದ ನಂತರ ಗೂಗಲ್ ಗ್ರಾಮದಲ್ಲಿ ತಮ್ಮ ಗಂಡನ ಮನೆಯಲ್ಲಿ ವಾಸ ಮಾಡುತ್ತಿದಾರೆ ಎಂದರೆ ಸರಿಯಲ್ಲ. ಸದರಿ ಇಟಗಿ ಹಾಗೂ ಗೂಗಲ್ ಗ್ರಾಮಗಳು 8-10 ಕಿ.ಮಿ. ಅಂತರದಲ್ಲಿರುತ್ತವೆ ಎಂದರೆ ಸರಿ.

3. ಬೆಂಡೆಬೆಂಬಳ್ಳಿ ಗ್ರಾಮದಲ್ಲಿ ಇರುವ ನಮ್ಮ ಹೊಲಗಳನ್ನು ನಾವೇ ನೋಡಿಕೊಳ್ಳುತ್ತೇವೆ. ಸದರಿ ಹೊಲಗಳಲ್ಲಿ ಹತ್ತಿಯನ್ನು ಬೆಳೆಯುತ್ತೇವೆ. ಒಕ್ಕಲುತನಕ್ಕಾಗಿ ನಾವು ಒಂದು ಟ್ರಾಕ್ಟರ್ ನ್ನು ಇಟ್ಟಕೊಂಡಿರುತ್ತೇವೆ ಎಂದರೆ ಸರಿಯಲ್ಲ.

4. ಸದರಿ ದಾವೆಯಲ್ಲಿ ನನ್ನ ಅಕ್ಕ ತಮ್ಮ ಸಾಕ್ಷಿಯನ್ನು ಕೊಟ್ಟ ನಂತರ ಸತತವಾಗಿ ನಮ್ಮ ಮಾನ್ಯ ವಕೀಲರ ಜೊತೆ ಪ್ರಕರಣದ ಬಗ್ಗೆ ತಿಳಿದುಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಪ್ರಕರಣದ ನಡೆಯವ ಸಂದರ್ಭದಲ್ಲಿ ನಾನು ನಮ್ಮ ಮಾನ್ಯ ವಕೀಲರಿಗೆ ಯಾವತ್ತಿಗೂ ಕರೆ ಮಾಡಿರುವುದಿಲ್ಲ. ನನ್ನ ಸದರಿ ಅಕ್ಕ ಹಾಗೂ ತಂಗಿ ಹಾಗೂ ನನ್ನ ತಮ್ಮ ಹುಬ್ಬಳ್ಳಿ ಗ್ರಾಮದಲ್ಲಿ ವಾಸ ಮಾಡುತ್ತಿದ್ದಾರೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ. ನನ್ನ ಸದರಿ ಅಕ್ಕ ಹಾಗೂ ತಂಗಿ ಇವರು ತಮ್ಮ ಗಂಡಂದಿರ ಮನೆಗಳಲ್ಲಿ ಇರುತ್ತಿದ್ದರಿಂದ ಹುಬ್ಬಳ್ಳಿಯಲ್ಲಿ ವಾಸ ಮಡುತ್ತಿದ್ದಾರೆ ಎಂದು ತೋರಿಸಲು ಯಾವುದೇ ದಾಖಲೆಗಳು ಇರದ ಕಾರಣ ನಾನು ಅವುಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ತಿರ್ಪಾಗಿದ್ದರ ಬಗ್ಗೆ ನಮಗೆ ತಿಳಿದಿದ್ದರೂ ಕುಡಾ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ನಮಗೆ ಯಾವುದೇ ರಿತೀಯಲ್ಲಿ ಸಂಬಂಧ ಇರದ ಕಾರಣ ನಾವುಗಳು ಪ್ರಸ್ತುತ ದಾವೆಯನ್ನು ಸಮಯದಲ್ಲಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮಾರುಕಟ್ಟೆ ಬೆಲೆ ಈಗ ಹೆಚ್ಚಾಗಿದ್ದರಿಂದ ನಾವುಗಳು ಪ್ರಸ್ತುತ ಮೇಲನ್ಮವಿಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾವುಗಳು ಹುಬ್ಬಳ್ಳಿಯಲ್ಲಿ ವಾಸ ಮಾಡುತ್ತಿದ್ದೆವೆ ಎಂದು ಸುಳ್ಳು ಹೇಳುತ್ತಿದ್ದೇವೆ ಎಂರದೆ ಸರಿಯಲ್ಲ. ನನ್ನ ಹತ್ತಿರ ಮೊಬೈಲ್ ಫೋನ್ ಇದ್ದು ನಾನು ನನ್ನ ಮಾನ್ಯ ವಕೀಲರಿಗೆ ಸದರಿ ದಾವೆ ಬಗ್ಗೆ ತಿಳಿದುಕೊಳ್ಳಬಹುದಾಗಿತ್ತು ಎಂದರೆ ಸರಿಯಲ್ಲ.

ಸದರಿ ತಿರ್ಪಿನ ಬಗ್ಗೆ ನನಗೂ, ನನ್ನ ಅಕ್ಕ, ತಂಗಿಯರಿಗೆ ಹಾಗೂ ನನ್ನ ತಮ್ಮನಿಗೆ ತಿಳಿದಿದ್ದರೂ ಕುಡಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.